ಸೇರಿ ಶ್ರೀಮಠ ಸೇರುವಂತಾಗಿ, ಕಠಿಣ ವ್ರತಾಚರಣೆಗಳನ್ನು ಗೆದ್ದು ಸದರಿ ಶಾಖಾ ಮಠದ ಕಿರಿಯ ಶ್ರೀಗಳಾದದ್ದು ಇತಿಹಾಸ.

ಶ್ರೀಮಠದ ಉಸ್ತುವಾರಿಯನ್ನು ವಹಿಸಿಕೊಂಡ ನಂತರವೂ ಕಿರಿಯ ಸ್ವಾಮಿಗಳು ಬಯಕೆಗಳಿಂದೇನೂ ದೂರವಾಗಿರಲಿಲ್ಲ. ಪ್ರಾರಂಭದ ದಿನಗಳಲ್ಲಿ ಅವರ ಬಯಕೆಗಳನ್ನು ಮನುಷ್ಯರ ಮೇಲೆ ಪ್ರಯೋಗಿಸಿದ್ದಕ್ಕಿಂತ ಮೂಕ ಪ್ರಾಣಿಗಳ ಮೇಲೆ ಪ್ರಯೋಗಿಸಿದ್ದೇ ಹೆಚ್ಚು. ಮಠದಲ್ಲಿದ್ದ ಗೋಶಾಲೆಗಳಿಗೆ ಆಗಿಂದಾಗ ಭೇಟಿಕೊಡುತ್ತಿದ್ದರು. ಹಸುಗಳು ಬಾಲ ಎತ್ತಿ ಗಂಜಲು ಹುಯ್ಯುವಾಗ ಆ ಜಾಗವನ್ನು ಆಸ್ಥೆಯಿಂದ ನೋಡುತ್ತಿದ್ದರು. ಕೆಲವೊಮ್ಮೆ ಅದರಿಂದ ಬರುತ್ತಿದ್ದ ಮಡೆಯನ್ನು ನೋಡಿ ರಂಗಾಗುತ್ತಿದ್ದರು. ಗಂಟೆಗಟ್ಟಲೆ ದನಗಳ ಮೈಸವರುತ್ತಿದ್ದ ಕಿರಿಯರು ಹಿಂಭಾಗದಲ್ಲಿ ಕೈಯಾಡಿಸುವುದನ್ನ ಮರೆಯುತ್ತಿರಲಿಲ್ಲ.

ಇದೆಲ್ಲ ಹೀಗೆ ಗುಪ್ತಗಾಮಿನಿಯಂತೆ ಪ್ರವಹಿಸುತ್ತಿದ್ದು ಯಾರೊಂದಿಗೂ ಹೇಳುವಂತದ್ದಾಗಲೀ, ಕೇಳುವಂತದ್ದಾಗಲೀ ಆಗಿರಲಿಲ್ಲ.

ಧಾರ್ಮಿಕ ಸಮ್ಮೇಳನದಲ್ಲಿ ಭೇಟಿಯಾದಂದಿನಿಂದ ಶಾಂತ ಸ್ವಾಮಿಗಳು ಅಳವಡಿಸಿಕೊಂಡಿದ್ದ ಜೀವನ ಶೈಲಿ ಕಿರಿಯ ಸ್ವಾಮಿಗಳನ್ನು ಅತಿಯಾಗಿ ಪ್ರಭಾವಿಸಿದಂತೆ ಕಾಣುತ್ತದೆ. ಅಂದಿನಿಂದ ಕಿರಿಯ ಸ್ವಾಮಿಗಳು ತಮ್ಮ ಪ್ರಾಣಿ ನಿಷ್ಠೆಯನ್ನು ಇತ್ತ ಇಂಚಿಂಚೆ ಮನುಷ್ಯರ ಕಡೆಗೂ ಹರಿಸುವಂತಾಗಿತ್ತು. ಅದರಲ್ಲೂ ಮಹಿಳೆಯರೊಂದಿಗಿನ ಅವರ ಒಡನಾಟ ನಿರ್ಜೀವ ವಸ್ತುಗಳ ಮಟ್ಟದಲ್ಲಿ ಮಾತ್ರವಿತ್ತು. ಸಾಮಾನ್ಯರಂತೆ ಟಿವಿಯಲ್ಲಿ ಬರುವ ಧಾರಾವಾಹಿಗಳನ್ನಾಗಲಿ, ಮೈಬಿಚ್ಚಿ ಕುಣಿಯುವ ನಟಿಯರ ಡಿಸ್ಕೊಗಳನ್ನಾಗಲಿ ನೋಡುತ್ತ ಕುಳಿತರೆ ಭಕ್ತರಿಗೆ ಕೆಟ್ಟ ಸಂದೇಶ ರವಾನಿಸಿದಂತಾಗುತ್ತದೆ ಎಂದು ಭಾವಿಸಿ ಟಿವಿಯಲ್ಲಿ ಬರುವ ವಾರ್ತೆಗಳನ್ನೆ ಹೆಚ್ಚಾಗಿ ನೋಡುತ್ತಿದ್ದರು. ವಾರ್ತೆ ಓದುವ ಮಹಿಳೆ ಉಸಿರೆಳೆದುಕೊಂಡಾಗ ಎದೆ ಉಬ್ಬುವುದು, ಇಳಿಯುವುದು, ತುಟಿ ಚಲನೆ ಇದನ್ನೆ ಗಮನಿಸುತ್ತ ಮುದಗೊಳ್ಳುತ್ತಿದ್ದ ಸ್ವಾಮಿಗಳಿಗೆ ಮಲಗಿದಾಗ ಸರಸದ ಕನಸುಗಳು ಬೀಳುತ್ತಿದ್ದವು. ರಾತ್ರಿಯೆಲ್ಲ ಹಾಸಿಗೆಯಲ್ಲಿ ಮುಲುಕಾಡುತ್ತಿದ್ದರು. ಕನಸಿನಲ್ಲಿ ಏನೊ ಸ್ರವಿಸಿದಂತಾಗುತ್ತಿತ್ತು. ಮುಂಜಾನೆ ಎದ್ದು ನೋಡಿದರೆ ಅವರ ಕಾವಿಯೆಲ್ಲ ಅಂಟಂಟಾಗಿರುತ್ತಿತ್ತು ಇಲ್ಲವೆ ರಟ್ಟೆನಂತಾಗಿರುತ್ತಿತ್ತು. ಅದನ್ನು ತೊಳೆದುಕೊಳ್ಳುವುದು ಶ್ರೀಗಳಿಗೆ ಮುಜುಗರದ ಸಂಗತಿಯಾಗದಿದ್ದರೂ ಯಾರಾದರೂ ನೋಡಿದರೆ ಹೇಗೆ ಅನಿಸುತ್ತಿತ್ತು.

ಇಂತಿಪ್ಪ ಋತುಗಳ ಬದಲಾಟದಲ್ಲಿ ಹಿಂದೆಲ್ಲ ಸಾಕಷ್ಟು ಬಿಗುಮಾನದಿಂದಿರುತ್ತಿದ್ದ ಶ್ರೀಗಳಲ್ಲಿ ಚೂರು ಚೂರೆ ಸಡಿಲಿಕೆ ಕಾಣುವಂತಾಗಿ... ಯಾರಾದರೂ ಮಾತನಾಡಿಸಿದರೆ ಒಂದಿಷ್ಟು ನಗುಮೊಗದೊಂದಿಗೆ ತುಸು ಹೆಚ್ಚಾಗಿಯೇ ನಿಂತು ಮಾತನಾಡುತ್ತಿದ್ದರು. ಶ್ರಾವಣ ಮಾಸದ ಒಂದು ದಿನ ಕಾಲಿಗೆರಗಲು ಬರುವ ಒಬ್ಬಾಕೆ ಭಕ್ತೆಯ ಭುಜಹಿಡಿದು ಸವರಬೇಕೆಂದು ಸಂಕಲ್ಪಮಾಡಿದವರಂತೆ ಅದಕ್ಕಾಗಿ ಬೆಳಗಿನಿಂದಲೇ ಸಿದ್ಧತೆ ನಡೆಸಿದ್ದರು. ಚೂಡಿದಾರ ಅದು ಇದು ಹಾಕಿ ಮಾರ್ಡನ್ ಆಗಿ ಬರುತ್ತಿದ್ದ ಭಕ್ತೆಯರಿಗಿಂತ ರಂಗು ರಂಗಾದ ಸೀರೆಯಲ್ಲಿ ಬರುತ್ತಿದ್ದ ಭಕ್ತೆಯರು ಶ್ರೀಗಳಿಗೆ ಹೆಚ್ಚು ಇಷ್ಟವಾಗುತ್ತಿದ್ದರು. ಅಂದು ಮಠಕ್ಕೆ ಬರುವವರು ಹೋಗುವವರ ಸಂಖ್ಯೆ ಹೆಚ್ಚಾಗಿದ್ದು, ಮಡಿ ಮೈಲಿಗೆಯಿಂದ ಅಲಂಕೃತರಾಗಿ ಬರುತ್ತಿದ್ದರು. ಬರುವ ಭಕ್ತೆಯರನ್ನು ದಿಟ್ಟಿಸುತ್ತಿದ್ದ ಶ್ರೀಗಳು ದೂರದಿಂದಲೆ ಮನಸೂರೆಗೊಳ್ಳುತ್ತಿದ್ದರಾದರೂ... ಸನಿಹವಾಗುವಷ್ಟರಲ್ಲಿ ಎದೆನಡುಗಿದಂತಾಗಿ ಸುಮ್ಮನಾಗಿಬಿಡುತ್ತಿದ್ದರು. ಹಿಂತಿರುಗಿ ಹೋಗುವಾಗ ಬ್ಲೌಸ್ ಹಿಂಭಾಗದಲ್ಲಿ ಕಾಣುತ್ತಿದ್ದ ಭಕ್ತೆಯರ ಬೆಳ್ಳಗಿನ ಆಳವಾದ ಬೆನ್ನನ್ನೆ ಮರೆಯಾಗುವವರೆಗೂ ಚಪ್ಪರಿಸುತ್ತಿದ್ದರು. ಇನ್ನು ಇಷ್ಟವಾದ ಕೆಲವರು ಒಬ್ಬೊಂಟಿಯಾಗಿ ಬರದೆ ದಂಡು ದಂಡಾಗಿ ಬರುತ್ತಿದ್ದು, ಆಗೆಲ್ಲ ಕೇವಲ ಆಶೀರ್ವದಿಸಿ